ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 75 ಗ್ರಾಪಸ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:03-04-2019.

**ಸುತ್ತೋಲೆ**

ವಿಷಯ: 14ನೇ ಹಣಕಾಸು ಆಯೋಗ ಅನುದಾನದ ಬಳಕೆಯ ಬಗ್ಗೆ ಮಾಹಿತಿ ಸಲ್ಲಿಸುವ ಕುರಿತು.

ಉಲ್ಲೇಖ: ದಿನಾಂಕ:01-04-2019ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ನೀಡಿದ ಸೂಚನೆಗಳು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಿಳಿಸುವುದೇನೆಂದರೆ, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ 14ನೇ ಹಣಕಾಸು ಆಯೋಗದಡಿಯಲ್ಲಿ ಸಾಮಾನ್ಯ ಮೂಲ ಅನುದಾನ ಹಾಗೂ ಕಾರ್ಯಕ್ಷಮತೆ ಅನುದಾನವನ್ನು ಈ ಕೆಳಕಂಡಂತೆ ಬಿಡುಗಡೆಗೊಳಿಸಿರುತ್ತದೆ.

(ರೂ. ಕೋಟಿಗಳಲ್ಲಿ)

| ವರ್ಷ | 14ನೇ ಹಣಕಾಸು ಆಯೋಗ ಅನುದಾನದ ವಿವರ | ರಾಜ್ಯ ಸರ್ಕಾರವು ಸ್ವೀಕರಿಸಿದ ಮೊತ್ತ | ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸಿದ ಅನುದಾನ (100%) | ESCROW ಖಾತೆಗೆ ಬಿಡುಗಡೆಗೊಳಿಸಿದ ಅನುದಾನ (25%) |
|---|---|---|---|---|
| 2015-16 | ಸಾಮಾನ್ಯ ಮೂಲ ಅನುದಾನ 1ನೇ ಕಂತು | 501.43 | 501.43 | 118.26 |
| 2015-16 | ಸಾಮಾನ್ಯ ಮೂಲ ಅನುದಾನ 2ನೇ ಕಂತು | 470.93 | 470.93 | 117.73 |
| | **ಒಟ್ಟು** | **972.36** | **972.36** | **235.99** |
| 2016-17 | ಸಾಮಾನ್ಯ ಮೂಲ ಅನುದಾನ 1ನೇ ಕಂತು | 684.16 | 684.16 | 171:04 |
| 2016-17 | ಸಾಮಾನ್ಯ ಮೂಲ ಅನುದಾನ 2ನೇ ಕಂತು | 684.04 | 684.04 | 171.01 |
| 2016-17 | ಕಾರ್ಯಕ್ಷಮತೆ ಅನುದಾನ | 179.45 | 179.45 | 44.48 |
| | **ಒಟ್ಟು** | **1547.65** | **1547.65** | **386.53** |
| 2017-18 | ಸಾಮಾನ್ಯ ಮೂಲ ಅನುದಾನ 1ನೇ ಕಂತು | 790.22 | 765.64 | 191.41 |
| 2017-18 | ಸಾಮಾನ್ಯ ಮೂಲ ಅನುದಾನ 2ನೇ ಕಂತು | 789.95 | 789.95 | 197.48 |
| 2017-18 | ಕಾರ್ಯಕ್ಷಮತೆ ಅನುದಾನ | 204.07 | 204.07 | 51.01 |
| | **ಒಟ್ಟು** | **1784.24** | **1784.24** | **439.90** |
| 2018-19 | ಸಾಮಾನ್ಯ ಮೂಲ ಅನುದಾನ 1ನೇ ಕಂತು | 920.76 | 920.76 | 230.19 |
| 2018-19 | ಸಾಮಾನ್ಯ ಮೂಲ ಅನುದಾನ 2ನೇ ಕಂತು | 920.76 | 920.76 | - |
| | **ಒಟ್ಟು:** | **1841.52** | **1841.52** | **230.19** |

ಮೇಲಿನಂತೆ ಬಿಡುಗಡೆಗೊಳಿಸಿದ ಅನುದಾನದ ಸದ್ಬಳಕೆಯ ಬಗ್ಗೆ ಯಾವುದೇ ಜಿಲ್ಲಾ ಪಂಚಾಯತಿಯಿಂದ ವರದಿಯಾಗಿರುವುದಿಲ್ಲ. ಸದರಿ ವಿಷಯದ ಕುರಿತು ದಿನಾಂಕ:01-04-2019ರಂದು ಸರ್ಕಾರದ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಪರಿಶೀಲನೆ ನಡೆಸಿದ್ದು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇದರ ಬಗ್ಗೆ ಪರಿಶೀಲನೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಸೂಚಿಸಿರುತ್ತಾರೆ.

ಪ್ರಯುಕ್ತ, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ, ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳ ಮತ್ತು ವಿದ್ಯುಚ್ಛಕ್ತಿ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿ, ಅನುಮೋದಿತ ಕ್ರಿಯಾಯೋಜನೆಗಳಂತೆ 14ನೇ ಹಣಕಾಸು ಆಯೋಗದಡಿಯಲ್ಲಿ ಸಾಮಾನ್ಯ ಮೂಲ ಅನುದಾನ ಹಾಗೂ ಕಾರ್ಯಕ್ಷಮತೆ ಅನುದಾನ ಉಪಯೋಗಿಸಿರುವ

ಬಗ್ಗೆ ಪರಿಶೀಲನೆ ನಡೆಸುವುದು ಹಾಗೂ ವಿದ್ಯುಚ್ಛಕ್ತಿ ಬಿಲ್ಲುಗಳ ಬಾಬ್ತು ESCROW ಖಾತೆಗಳಿಗೆ ಬಿಡುಗಡೆಯಾಗಿರುವ ಅನುದಾನದ ಬಳಕೆಯ ಬಗ್ಗೆ ಸಹ ಪರಿಶೀಲನೆ ನಡೆಸಿ, ಇದರೊಂದಿಗೆ ಲಗತ್ತಿಸಿರುವ ನಮೂನೆ-1 ಮತ್ತು 2ರಲ್ಲಿ ದಿನಾಂಕ:20-04-2019ರೊಳಗೆ sozp.11@gmail.com & directorpr2015@gmail.com ಗೆ ಇ-ಮೇಲ್ ಮೂಲಕ ಸಲ್ಲಿಸಲು ಸೂಚಿಸಿದೆ.

**ವಿಷಯ ಸೂಚಿ:** 2019-20ನೇ ಸಾಲು 14ನೇ ಹಣಕಾಸು ಆಯೋಗ ಅನುದಾನದ ಕೊನೆಯ ವರ್ಷವಾಗಿದ್ದು, ಹಿಂದಿನ ನಾಲ್ಕು ವರ್ಷಗಳ ಅನುಮೋದಿತ ಕ್ರಿಯಾಯೋಜನೆಗಳ ಉಳಿದ ಕಾಮಗಾರಿಗಳನ್ನು ಕಡ್ಡಾಯವಾಗಿ 2019-20ನೇ ಸಾಲಿನ ಕ್ರಿಯಾಯೊಜನೆಯಲ್ಲಿ ಸೇರಿಸಲು ಸೂಚಿಸಿದೆ.

03/04/2019

(ಎಲ್.ಕೆ.ಅತೀಕ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಆಯೋಗ ಕೋಶ, ಆರ್ಥಿಕ ಇಲಾಖೆರವರ ಆಪ್ತ ಸಹಾಯಕರು.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

**ಪ್ರತಿಯನ್ನು ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿರವರ ಮಾಹಿತಿಗಾಗಿ.
2. ಸರ್ಕಾರದ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿರವರ ಮಾಹಿತಿಗಾಗಿ.
3. ನಿರ್ದೇಶಕರು (ಪಂ.ರಾಜ್-1 ಮತ್ತು 2) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರು.
4. ವೆಬ್ ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

## ನಮೂನೆ-2

### 14ನೇ ಹಣಕಾಸು ಆಯೋಗದ ಕಾರ್ಯಕ್ಷಮತೆ ಅನುದಾನದ ಬಳಕೆಯ ಬಗ್ಗೆ ವರ್ಷವಾರು (2015-16 ರಿಂದ 2017-18ರವರೆಗೆ) ಮಾಹಿತಿ

ಜಿಲ್ಲೆಯ ಹೆಸರು:

| ಕ್ರಸಂ | ವರ್ಷ | ಗ್ರಾಮ ಪಂಚಾಯತಿಗಳ ಸಂಖ್ಯೆ | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) | ಖರ್ಚಾಗಿರುವ ಅನುದಾನ (ಬ್ಯಾಂಕ್ ಪಾಸ್‌ಶೀಟ್ ಪ್ರಕಾರ) | ಪಂಚತಂತ್ರ/ಗಾಂಧಿ ಸಾಕ್ಷಿಕಾಯಕ ಮಾಹಿತಿಯನುಸಾರ ವೆಚ್ಚ | ವ್ಯತ್ಯಾಸ | ಕೈಗೊಂಡ ಕಾಮಗಾರಿಗಳು | ಪೂರ್ಣಗೊಂಡ ಕಾಮಗಾರಿಗಳು | ESCROW ಖಾತೆಗಳಿಗೆ ಬಿಡುಗಡೆಯಾಗಿರುವ ಅನುದಾನದ | ವಿದ್ಯುಚ್ಛಕ್ತಿ ಬಿಲು ಬಾಬ್ತು ESCOMಗಳಿಗೆ ಪಾವತಿಸಿದ ಅನುದಾನ | ವ್ಯತ್ಯಾಸ ಮೊತ್ತ | ಷರಾ |
|---|---|---|---|---|---|---|---|---|---|---|---|---|
| 1 | 2015-16 | | | | | | | | | | | |
| 2 | 2016-17 | | | | | | | | | | | |
| 3 | 2017-18 | | | | | | | | | | | |

## ನಮೂನೆ–1

### 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದ ಬಳಕೆಯ ಬಗ್ಗೆ ವರ್ಷವಾರು (2015–16 ರಿಂದ 2018–19ರವರೆಗೆ) ಮಾಹಿತಿ

ಜಿಲ್ಲೆಯ ಹೆಸರು:

| ಕ್ರ.ಸಂ | ವರ್ಷ | ಗ್ರಾಮ ಪಂಚಾಯತಿಗಳ ಸಂಖ್ಯೆ | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) | ಖರ್ಚಾಗಿರುವ ಅನುದಾನ (ಬ್ಯಾಂಕ್ ಪಾಸ್‌ಶೀಟ್ ಪ್ರಕಾರ) | ಪಂಚತಂತ್ರ/ಗಾಂಧಿ ಸಾಕ್ಷಿಕಾಯಕ/PRIASoft ಮಾಹಿತಿಯನುಸಾರ ವೆಚ್ಚ * | ವ್ಯತ್ಯಾಸ | ಕೈಗೊಂಡ ಕಾಮಗಾರಿಗಳು | ಪೂರ್ಣಗೊಂಡ ಕಾಮಗಾರಿಗಳು | ESCROW ಖಾತೆಗಳಿಗೆ ಬಿಡುಗಡೆಯಾಗಿರುವ ಅನುದಾನದ | ವಿದ್ಯುತ್‌ಚ್ಛಕ್ತಿ ಬಿಲು ಬಾಬ್ತು ESCOMಗಳಿಗೆ ಪಾವತಿಸಿದ ಅನುದಾನ | ವ್ಯತ್ಯಾಸ ಮೊತ್ತ | ಷರಾ |
|---|---|---|---|---|---|---|---|---|---|---|---|---|
| 1 | 2015–16 | | | | | | | | | | | |
| 2 | 2016–17 | | | | | | | | | | | |
| 3 | 2017–18 | | | | | | | | | | | |
| 4 | 2018–19 | | | | | | | | | | | |

* ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 440 ಜಿಪಸ 2018, ದಿನಾಂಕ:17–12–2018ರಂತೆ PRIASoft ತಂತ್ರಾಂಶವನ್ನು ಬಳಸುವುದು ಮತ್ತು ಎಲ್ಲಾ ಪಾವತಿಗಳನ್ನು PRIASoft ಮತ್ತು PFMS ತಂತ್ರಾಂಶದ ಮೂಲಕವೇ ಮಾಡಲು ಕಡ್ಡಾಯಪಡಿಸಿರುತ್ತದೆ. ಪ್ರಯುಕ್ತ ಸದರಿ ದಿನಾಂಕದ ನಂತರ 14ನೇ ಹಣಕಾಸು ಆಯೋಗದಡಿಯಲ್ಲಿ ಅನುದಾನವನ್ನು ಹಿಂದಿನ ಪದ್ಧತಿಯಂತೆ ಪಾವತಿಸಲು ಬರುವುದಿಲ್ಲ ಎಂದು ತಿಳಿಸಿದೆ.